| Form No.4 (Civil) Deposition Sheets (R.P.No.57) |
| --- |

## ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 3/2014

ಪ್ರಾ.ಸಾ. 5 ಚಾ.ಸಾ. 7

| | | |
| --- | --- | --- |
| ಹೆಸರು | : | ನವೀದ ಇಕಬಾಲ |
| ತಂದೆಯ ಹೆಸರು | : | ರಹೇಮಾನ ಇನಾಮದಾರ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ಶಹಾಪೂರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-01-2026
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾಃ 1 ಗೊತ್ತು ಅವರು ನನ್ನ ಗೆಳೆಯ. ಈ ಪ್ರಕರಣದ ಆರೋಪಿ ಮಲ್ಲಪ್ಪ ಗೊತ್ತಿಲ್ಲ.

2. ದಿಃ 15-03-2014 ರಂದು ಚಾಸಾಃ 1 ನನ್ನ ಗೆಳೆಯ ಇವರು ತಮ್ಮ ತಂದೆಯ ಹೆಸರಿನಲ್ಲಿದ್ದ ಸರ್ವೆ ನಂ 13 ಬೆನಕನಳ್ಳಿ ಜೈನ 6 ಎಕ್ಕರೆ 2 ಗುಟೆ ಹೊಲದ ಪಹಣಿ ಪತ್ರಿಕೆ 11 ನೇ ಕಲಂ ನಲ್ಲಿ 15 ವರ್ಷ ಪರಭಾರೆ ಮಾಡಬಾರದು ಎಂದು ಶರಾ ಇದ್ದು ಅದನು ತೆಗೆಯಲು ಶಹಾಪುರ ಎಸ್ ಡಿ ಸಿ ಕಛೇರಿಯ ಮಲ್ಲಪ್ಪ ರವರು ರೂ 3500/- ಲಂಚ ಕೆಳಿ ಸತಾಯಿಸುತ್ತಿದ್ದು ಆತ ತನ್ನ ಜೊತೆ ಲೊಕಾ ಯುಕ್ತ ಠಾಣೆಗೆ ಹೊಗಿ ದೂರು ನೀಡಿಲು ಬಾ ಎಂದು ಕರೆದಿದ್ದು ಅದೆ ದಿನ ನಾನು ಮುಂಜಾನೆ 8-30 ಕ್ಕೆ ಆತನ ಜೊತೆ ಯಾದರಿಗೆ ಲೊಕಾಯುಕ್ತ ಠಾಣೆಗೆ ಹೊಗಿದು್ದ ಆತನಿಗೆ ಕನ್ನಡ ಓದಲು ಬರೆಯಲು ಬರದಕಾರಣ ಆತ ಹಿಂದಿಯಲ್ಲಿನ ಹೆಳಿದ್ದನ್ನು ನಾನು ಕನ್ನಡದಲ್ಲಿ ಅನೂವಾದ ಮಾಡಿ ಕಂಪ್ಯೂಟರ ನಲ್ಲಿ ಟೈಪ ಮಾಡಿಸಿ ಲೊಕಾಯಕ್ತ ಠಾಣೆಗೆ ಹೊಗಿ ಸದರಿ ಆರೊಪಿ ಮಲ್ಲಪ್ಪ ರವರ ವಿರುದ್ದ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿರುತ್ತೆವೆ.

3. ನಂತರ ಲೊಕಾಯುಕ್ತ ಅಧಿಕಾರಿಗಳು ಇಬ್ಬರೂ ಸರಕಾರಿ ಅಧಿಕಾರಗಳನ್ನು ಕರೆಯಿಸಿ ಅವರ ಮುಂದೆ ಪ್ರಾಯೊಗಿಕ ಪಂಚನಾಮೆಯನ್ನು ಬೆಃ 10- 00 ರಿಂದ 11-00 ರವರೆಗೆ ಮಾಡಿ .

ಚಾಸಾಃ 1 ರವರು ಹಾಜರು ಪಡಿಸಿದ ರೂ.500/- ಮೌಲ್ಯದ 7 ನೋಟುಗಳಿಗೆ ಫಿನಾಪ್ತಲಿನ ಪುಡಿ ಹಚ್ಚಿ ಪಂಚ ಸಾಕ್ಷಿ ಇವರಿಗೆ ಕೊಟ್ಟು. ಅವರು ಎರಡು ಕೈಗಳಿಂದ ಏಣಿಸಿ ಚಾಸಾಃ 1 ರವರು ಶರ್ಟಿನ ಎಡಗಡೆ ಜೆಬಿನಲ್ಲಿ ಇಟ್ಟರು. ಸದರಿ ಪಂಚ ಸಾಕ್ಷಿಯ ಎರಡು ಕೈಗಳನ್ನು ಸೋಡಿಯಂಕಾರ್ಬೋನೇಟ ಧ್ರಾವಣದಲ್ಲಿ ತೊಳೆಸಿದಾಗ ಧ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಸದರಿ ಧ್ರಾವಣವನ್ನು ಗಾಜಿನ ಬಾಟಲಿಯಲ್ಲಿ ಶೆಖರಿಸಿಡಲಾಯಿತು. ಆ ನಂತರ ಮದ್ಯಾಹ್ನ ಮಲ್ಲಪ್ಪ ರವರು ರೂ.3500/- ಲಂಚ ಪಡೆಯುವಾಗ ಲೊಕಾಯಕ್ತ ಬಲೆಗೆ ಬಿದ್ದ ಬಗ್ಗೆ ತಿಳಿಯಿತು. ಈ ಬಗ್ಗೆ ನಾನು ಲೊಕಾಯಕ್ತ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ರೂ 3500/- ಲಂಚದ ಹಣ ನೊಡಿದರೆ ಗುರುತಿಸುತ್ತೆನೆ ಅದನ್ನು ಈಗಾಗಲೆ ಮುಮಾ 1 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ ವಿ ವಕೀಲರಿಂದ</u>

4. ಈ ಪ್ರಕರಣದ ಆರೂಪಿತರಾರದ ಮಲ್ಲಪ್ಪ ಹುಗ್ಗಿ ರವಗಿಗೆ ಪಹಣಿ ಕಲಂ 11ರಲ್ಲಿ ನಮೂದಿಸಿ ಹಿಂಬರಹವನ್ನು ತೆಗೆಯುವ ಅಧಿಕಾರ ಇಲ್ಲ ಎಂದರೆ ಗೆೊತ್ತಿಲ್ಲ. ಈ ಪ್ರಕರಣದಲ್ಲ ಚಾಸಾಃ 1 ನನ್ನ ಗೆಳೆಯ ನಿಪಿ 1ದೂರನ್ನು ಹಿಂದಿಯಲ್ಲಿ ಹೇಳಿ ನಾನು ಕನ್ನಡಕ್ಕೆ ತರ್ಜುಮೆ ಮಾಡಿ ಕಂಪ್ಯೂಟರ ನಲ್ಲಿ ಟೈಪ ಮಾಡಿಸಿದೆ ಎಂದು ಸದರಿ ದೂರು ನಿಪಿ 1 ರಲ್ಲಿ ಹೇಳಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಫ್ರಾಯೊಗಿಕ ಪಂಚನಾಮೆಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಈ ಪ್ರಕರಣ ಪಂಚರು ಯಾರು ಮತ್ತು ಅವರು ಹೆಸರುಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಲಂ ಚದ ನೊಟುಗಳ ಸಂಖ್ಯೆಗಳನ್ನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ನೆನಪಿಲ್ಲ. ಸದರಿ ನೊಟುಗಳ ಸಂಖ್ಯೆಗಳು ನನಗನೆ ಗೊತ್ತಿಲ್ಲ.

5. ದಿಃ 15-03-2014 ರಂದು ಚಾಸಾಃ 1 ನನ್ನ ಗೆಳೆಯ ಇವರು ತಮ್ಮ ತಂದೆಯ ಹೆಸರಿನಲ್ಲಿದ್ದ ಸರ್ವೆ ನಂ 13 ಬೆನಕನಳ್ಳಿ ಜೈನ 6 ಎಕ್ಕರೆ 2 ಗುಟೆ ಹೊಲದ ಪಹಣಿ ಪತ್ರಿಕೆ 11 ನೇ ಕಲಂ ನಲ್ಲಿ 15 ವರ್ಷ ಪರಭಾರೆ ಮಾಡಬಾರದು ಎಂದು ಶರಾ ಇದ್ದು ಅದನು ತೆಗೆಯಲು ಶಹಾಪುರ ಎಸ್ ಡಿ ಸಿ ಕಛೇರಿಯ ಮಲ್ಲಪ್ಪ ರವರು ರೂ 3500/- ಲಂಚ ಕೆಳಿ ಸತಾಯಿಸುತ್ತಿದ್ದು ಆತ ತನ್ನ ಜೊತೆ ಲೊಕಾ ಯುಕ್ತ ಠಾಣೆಗೆ ಹೊಗಿ ದೂರು ನೀಡಿಲು ಬಾ ಎಂದು ಕರೆದಿದ್ದು ಅದೆ ದಿನ ನಾನು ಮುಂಜಾನೆ 8-30 ಕ್ಕೆ ಆತನ ಜೊತೆ ಯಾದರಿಗೆ ಲೊಕಾಯುಕ್ತ ಠಾಣೆಗೆ ಹೊಗಿದು್ದ ಆತನಿಗೆ ಕನ್ನಡ ಓದಲು ಬರೆಯಲು ಬರದಕಾರಣ ಆತ ಹಿಂದಿಯಲ್ಲಿನ ಹೆಳಿದ್ದನ್ನು ನಾನು ಕನ್ನಡದಲ್ಲಿ ಅನೂವಾದ ಮಾಡಿ ಕಂಪ್ಯೂಟರ ನಲ್ಲಿ ಟೈಪ ಮಾಡಿಸಿ ಲೊಕಾಯಕ್ತ ಠಾಣೆಗೆ ಹೊಗಿ ಸದರಿ ಆರೊಪಿ ಮಲ್ಲಪ್ಪ ರವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಂತರ ಲೊಕಾಯುಕ್ತ ಅಧಿಕಾರಿಗಳು ಇಬ್ಬರೂ ಸರಕಾರಿ ಅಧಿಕಾರಗಳನ್ನು ಕರೆಯಿಸಿ ಅವರ ಮುಂದೆ ಪ್ರಾಯೊಗಿಕ ಪಂಚನಾಮೆಯನ್ನು ಬೆ: 10- 00 ರಿಂದ 11-00 ರವರೆಗೆ ಮಾಡಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ: 1 ರವರು ಹಾಜರು ಪಡಿಸಿದ ರೂ.500/- ಮೌಲ್ಯದ 7 ನೋಟುಗಳಿಗೆ ಫಿನಾಪ್ತಲಿನ ಪುಡಿ ಹಚ್ಚಿ ಪಂಚ ಸಾಕ್ಷಿ ಇವರಿಗೆ ಕೊಟ್ಟು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಎರಡು ಕೈಗಳಿಂದ ಏಣಿಸಿ ಚಾಸಾ: 1 ರವರು ಶರ್ಟಿನ ಎಡಗಡೆ ಜೆಬಿನಲ್ಲಿ ಇಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚ ಸಾಕ್ಷಿಯ ಎರಡು ಕೈಗಳನ್ನು ಸೋಡಿಯಂಕಾರ್ಬೋನೇಟ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದ್ರಾವಣವನ್ನು ಗಾಜಿನ ಬಾಟಲಿಯಲ್ಲಿ ಶೆಖರಿಸಿಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಂತರ ಮದ್ಯಾಹ್ನ ಮಲ್ಲಪ್ಪ ರವರು ರೂ.3500/- ಲಂಚ ಪಡೆಯುವಾಗ ಲೊಕಾಯಕ್ತ ಬಲೆಗೆ ಬಿದ್ದ ಬಗ್ಗೆ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಲೊಕಾಯಕ್ತ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.